

### ಹೇರ್ ಕಟ್

ಕೇಶವ: ಅಮ್ಮೀ, ನಾನು ಸಲೂನ್ ಕಡೆ ಹೋಗಿ ಬರ್ತೀನೆ.
ವಿಮಲ: ಮಾರಾಯ್ರೇ, ನಿಮ್ಮ ತಲೆಯಲ್ಲಿ ಇರುವುದೇ ನಾಲ್ಕು ಕೂದಲು. ಅದನ್ಯಾಕೆ ಸುಮ್ಮನೆ ಕಟ್ ಮಾಡಿಸ್ತೀರಾ?
ಕೇಶವ: ಇಲ್ಲಮ್ಮೀ, ನಾನು ಹೇರ್ ಕಟ್ ಮಾಡಿಸಲ್ಲ.
ವಿಮಲ: ಮತ್ಯಾಕೆ ಸಲೂನಿಗೆ ಹೋಗ್ತೀರಿ ಮಾರ್ರೆ?
ಕೇಶವ: ನಾನು ಹೋಗ್ತಿರೋದು ಅದೇ ನಾಲ್ಕು ಕೂದಲಿಗೆ ಡೈ ಹಾಕಿಸಲು !”
***

### ನಿದ್ರೆ ಮಾತ್ರೆ

ಕೇಶವ: ಡಾಕ್ಟ್ರೇ, ನನಗೆ ನಿದ್ರೆ ಮಾತ್ರೆ ಬೇಕಿತ್ತು.
ಡಾಕ್ಟರ್: ನೀವು ಕಳೆದ ಸಲ ಬಂದಾಗ್ಲೇ ನಿದ್ರೆ ಮಾತ್ರೆ ನಿಮ್ಮ ಆರೋಗ್ಯಕ್ಕೆ ಒಳ್ಳೆಯದಲ್ಲ. ಅದರ ಬದಲು ಧ್ಯಾನ ಮಾಡಿ ಅಂತ ಹೇಳಿದ್ದೆ.
ಕೇಶವ: ಹೌದು ಡಾಕ್ಟ್ರೇ. ನೀವು ಹೇಳಿದ ಹಾಗೆ ನಾನು ಮಲಗುವ ಮೊದಲು ಧ್ಯಾನ ಮಾಡಲು ಪ್ರಯತ್ನಿಸುತ್ತೇನೆ. ಆದ್ರೆ...
ಡಾಕ್ಟರ್: ಆದ್ರೆ, ಎಂತ ಆಯ್ತು?
ಕೇಶವ: ಆಗ ನನ್ನ ಹೆಂಡತಿ ಪಿರಿಪಿರಿ ಮಾಡ್ತಾಳೆ. ಅದಕ್ಕೆ ಅವಳಿಗೆ ಕೊಡುವುದಕ್ಕೋಸ್ಕರ ನಾನು ನಿದ್ರೆಮಾತ್ರೆ ಕೇಳಿದ್ದು !
***

### ಫಲಕ

ಹಳ್ಳಿಯಿಂದ ಬಂದ ಮಾಂಕು ಮತ್ತು ಸೋಂಪ ಬೆಂಗಳೂರಿನ ರಸ್ತೆಯಲ್ಲಿ ವೇಗವಾಗಿ ನಡೆದುಕೊಂಡು ಹೋಗ್ತಿರಬೇಕಾದ್ರೆ ಸೋಂಪ ಇದ್ದಕ್ಕಿದ್ದಂತೆ ವೇಗವನ್ನು ತಗ್ಗಿಸಿದ.
ಮಾಂಕು: ಎಂತದಕ್ಕೆ ಸೋಂಪಣ್ಣ, ನೀವು ನಡಿಗೆಯನ್ನು ನಿಧಾನ ಮಾಡಿದ್ರಿ?
ಸೋಂಪ: ಅಲ್ಲಿ ಬೋರ್ಡ್ ನೋಡು ಮಾರಾಯ!
(ಫಲಕವೊಂದರಲ್ಲಿ ‘ಶಾಲಾ ವಠಾರ. ನಿಧಾನವಾಗಿ ಚಲಿಸಿ’ ಎಂದಿತ್ತು)
ಮಾಂಕು: ಓ ಹೌದಲ್ಲ..! (ನಿಧಾನವಾಗಿ ನಡೆದ)
***

### ವಿಜೇತ

ಮಾಂಕು ಮತ್ತು ಸೋಂಪ ಒಂದು ಸ್ಟೇಡಿಯಂ ಒಳಗೆ ಹೋದ್ರು. ಅಲ್ಲಿ ಓಡುವ ಸ್ಪರ್ಧೆ ನಡೆಯುತ್ತಿತ್ತು.
ಸೋಂಪ: ಅವರೆಲ್ಲಾ ಯಾಕೆ ಒಟ್ಟಿಗೆ ಓಡುತ್ತಿದ್ದಾರೆ, ಮಾರಾಯ?
ಮಾಂಕು: ಯಾಕೆಂದರೆ ವಿಜೇತನಿಗೆ ಮಾತ್ರ ಪಾರಿತೋಷಕ ಸಿಗುತ್ತದೆ.
ಸೋಂಪ: ವಿಜೇತನಿಗೆ ಮಾತ್ರ ಪಾರಿತೋಷಕ ಸಿಗುತ್ತದೆ, ಎಂದ ಮೇಲೆ ಬಾಕಿದ್ದವರು ಸುಮ್ಮನೆ ಎಂತದಕ್ಕೆ ಓಡುವುದು?
***



### ಫೋನ್

ಯಾವಾಗಲೂ ಫೋನಿನಲ್ಲಿ ಗಂಟೆಗಟ್ಟಲೆ ಮಾತನಾಡುವ ಕೇಶವನ ಹೆಂಡತಿ ವಿಮಲ ಇವತ್ತು ಯಾರ ಜೊತೆಗೋ ಅರ್ಧಗಂಟೆ ಮಾತನಾಡಿ ಫೋನ್ ಇಟ್ಟಳು.
ಕೇಶವ: ಅದೇನು? ಯಾವತ್ತೂ ಎರಡೆರಡು ಗಂಟೆ ಮಾತನಾಡುವವಳು ಇವತ್ತು ಅರ್ಧಗಂಟೆಯಲ್ಲಿ ಮುಗಿಸಿದೆ?
ವಿಮಲ: ಓ ಅದಾ? ಯಾರೋ ರಾಂಗ್ ನಂಬರ್!
***

### ಮಳೆನೀರು

ಸೋಂಪ ಬಿಂದಿಗೆ ಹಿಡಿದುಕೊಂಡು ತೋಟದ ಕಡೆಗೆ ಹೊರಟಿದ್ದ.
ಮಾಂಕು: ಅರೆ, ಸೋಂಪಣ್ಣ. ನೀವು ಯಾವ ಕಡೆಗೆ ಹೊರಟದ್ದು?
ಸೋಂಪ: ನಾನು ತೋಟಕ್ಕೆ ನೀರು ಬಿಡಲು ಹೊರಟೆ ಮಾರಾಯ
ಮಾಂಕು: ಆದ್ರೆ ಮೇಲೆ ಮೋಡ ನೋಡಿ. ಭಯಂಕರ ಮಳೆ ಬರುವಂತಿದೆ !
ಸೋಂಪ: ಗೊತ್ತಿದೆ ಮಾರಾಯ. ಅದಕ್ಕೆ ಕೊಡೆ ಹಿಡಿದುಕೊಂಡೇ ಹೊರಟೆ..!
***

### ಬಿಸಿಯೂಟ

ಮಾಂಕು: ಕೇಶವ, ನೀನ್ಯಾಕೆ ರಾತ್ರಿ ಮನೆಗೆ ಬೇಗ ಹೋಗುತ್ತಿ?
ಕೇಶವ: ಯಾಕೆಂದ್ರೆ ಬೇಗ ಹೋದ್ರೆ ಊಟ ಬಿಸಿಯಾಗಿರುತ್ತದೆ, ಹೆಂಡತಿ ತಣ್ಣಗಿರುತ್ತಾಳೆ.
ಮಾಂಕು: ತಡವಾಗಿ ಹೋದ್ರೆ?
ಕೇಶವ: ಊಟ ತಣ್ಣಗಾಗಿರುತ್ತದೆ, ಹೆಂಡತಿ ಬಿಸಿಯಾಗಿರುತ್ತಾಳೆ...!

(ಸಂಗ್ರಹ) ರಮೇಶ್ ಶೆಟ್ಟಿಗಾರ್, ಮಂಜೇಶ್ವರ



### ವ್ಯಾಲೆಂಟೈನ್, ಕ್ವಾರಂಟೈನ್

ಅಪ್ಪ: ವ್ಯಾಲೆಂಟೈನ್ ಮತ್ತು ಕ್ವಾರಂಟೈನ್‌ಗೆ ಇರುವ ವ್ಯತ್ಯಾಸ ಏನು?
ಮಗ: ವ್ಯಾಲೆಂಟೈನ್ ವೇಳೆ ಅಪ್ಪಿಕೊಂಡರೆ, ಕ್ವಾರಂಟೈನ್‌ನಲ್ಲಿ ದೂರ ಇರುತ್ತಾರೆ!

